ಅದೇ ರೀತಿ ರಬಿ 2002ರ ಬೆಳೆಗೆ ಸಂಬಂಧಿಸಿದಂತೆ ರೂ.12.68 ಕೋಟಿಗಳ ಪೈಕಿ ರೂ.10.00 ಕೋಟಿಗಳು ಬಿಡುಗಡೆ ಮಾಡಿದ್ದು ಉಳಿದ ರೂ.2.68 ಕೋಟಿಗಳನ್ನು ಬಿಡುಗಡೆ ಮಾಡಬೇಕಿರುತ್ತದೆ.

1478(1414) ಶ್ರೀ ಪ್ರಭಾಕರ ಬಂಗೇರಾ.ಕೆ(ಬೆಳ್ತಂಗಡಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರ ಇಲಾಖೆಯಲ್ಲಿ ಜಾರಿಗೆ ತಂದ ಸ್ವಸಹಾಯ ಗುಂಪುಗಳ ಯೋಜನೆ ಅನ್ವಯ ರಾಜ್ಯದಲ್ಲಿ ಎಷ್ಟು ಗುಂಪುಗಳನ್ನು ರಚಿಸಲಾಗಿದೆ (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಸದರಿ ಯೋಜನೆಯ ಪ್ರಗತಿ ವಿವರಗಳೇನು?

ಇ) ಯೋಜನೆಯ ವಿಸ್ತರಣೆಗಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ ದೇಶಪಾಂಡೆ (ಸಹಕಾರ ಸಚಿವರು):

ಅ) ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ 84748 ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಜಿಲ್ಲಾವಾರು ಮಾಹಿತಿ ಅನುಬಂಧ–Iರಲ್ಲಿ ಲಗತ್ತಿಸಿದೆ.

ಆ) ಸದರಿ ಯೋಜನೆಯ ಪ್ರಗತಿಯಿಂದ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ಜನ ಸಮುದಾಯದಲ್ಲಿ ಉಳಿತಾಯ ಮನೋಭಾವ ಮತ್ತು ಅವರ ಅಭಿವೃದ್ಧಿಗಾಗಿ ಬ್ಯಾಂಕುಗಳ ಮೂಲಕ ಆರ್ಥಿಕ ಜೋಡಣೆ ಮಾಡಲಾಗಿರುತ್ತದೆ.

ಕ್ರ.ಸಂ.	ವರ್ಷ	ಸ್ವಸಹಾಯ ಗುಂಪುಗಳ ರಚನೆ (ಸಂಖ್ಯೆ)	ಉಳಿತಾಯ ಲಕ್ಷ ರೂ.	ಬ್ಯಾಂಕುಗಳ ಜೋಡಣೆ ಲಕ್ಷ ರೂ.	ಸಾಲದ ಮೊತ್ತ ಲಕ್ಷ ರೂ.
5.	31.03.2002	24895	1919.14	8821	2042.92
6.	31.03.2003	40673	3763.03	18063	4217.20
7.	31.03.2004	70288	6736.43	31920	8010.14
8.	31.12.2004	84748	9273.39	44495	11220.70

ಇ) ಯೋಜನೆಯ ವಿಸ್ತರಣೆಗಾಗಿ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಸ್ವಸಹಾಯ ಗುಂಪುಗಳ ಘಟಕವನ್ನು ಪ್ರಾರಂಭಿಸಲಾಗಿದೆ ಹಾಗೂ ಪ್ರತ್ಯೇಕವಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ಸದರಿ ಕೆಲಸಕ್ಕಾಗಿಯೇ ನೇಮಕ ಮಾಡಲಾಗಿದೆ. ಇದರ ಜೊತೆಗೆ ಅವಶ್ಯಕವಿರುವ ಕಡೆ ಪ್ರೇರಕರನ್ನೂ ಸಹ ಸರ್ಕಾರೇತರ ಸಂಸ್ಥೆಗಳ ಒಪ್ಪಂದಗಳ ಮೇಲೆ ಹಾಗೂ ಕ್ರೋಢೀಕೃತ ದಿನಗೂಲಿ ವೇತನದ ಮೇಲೆ ಸಿಬ್ಬಂದಿಗಳನ್ನು ಈ ಕಾರ್ಯದಲ್ಲಿ ತೊಡಗಿಸಲಾಗಿದೆ. ಸರ್ಕಾರವು ರಾಜ್ಯಮಟ್ಟದ ಪರಿಶೀಲನಾ ಸಲಹಾ ಸಮಿತಿಯನ್ನು ಇದರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಹ ರಚಿಸಿದೆ.